**ದಿಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ A.S.J. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ M.M.V. ವಕೀಲರಿಂದ**

ನನಗೆ ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ವಿಷ್ಣು ಪಾಂಡುರಂಗ ಗೌಡಾ ರವರ ಮನೆ, ಪಶ್ಚಿಮಕ್ಕೆ ಯಾರ ಆಸ್ತಿ ಇದೆ ಗೊತ್ತಿಲ್ಲ , ಉತ್ತರಕ್ಕೆ ಪ್ರಹ್ಲಾದ ಚುರಮುರಕರ ರವರ ಮನೆ, ದಕ್ಷಿಣಕ್ಕೆ ಖಾಲಿ ಜಾಗ ಇದ್ದು ಅದರ ನಂತರ ರಸ್ತೆ ಇರುತ್ತದೆ. ದಾವಾ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲದ ಕಾರಣ ನನಗೆ ಹೇಳಲು ಆಗುವುದಿಲ್ಲ. ದಾವಾ ಸರ್ವೆ ನಂಬರದಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಪಂಚಾಯತಿಯ ದಾಖಲೆಗಳಲ್ಲಿ ನನ್ನ ಹೆಸರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲಾಗಿರುತ್ತದೆ. ಉಳಿದ ಮನೆಗಳ ಮಾಲೀಕರ ಹೆಸರು ದಾಖಲಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.

ನಮ್ಮ ಮನೆಯ ದಕ್ಷಿಣಕ್ಕೆ ರಸ್ತೆ ಇದೆ. ನಮ್ಮ ಮನೆಯ ಉತ್ತರಕ್ಕೆ ನಾಮದೇವ ರವರ ಮನೆ ಇದೆ ಎಂದರೆ ಸರಿಯಲ್ಲ. ನನಗೆ ಮರಾಠಿ ಓದಲು ಬರುವುದಿಲ್ಲ. ನಮ್ಮ ಮನೆಯ ಸಂಖ್ಯೆ 975. ನಿಪಿ 3 ರಲ್ಲಿ ಮನೆಯ ಸಂಖ್ಯೆ 597/ಎ ಎಂದು ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಓದಲು ಬಾರದ ಕಾರಣ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಮೃತ ಪಟ್ಟು ಸುಮಾರು 25 ವರ್ಷಗಳು ಆಗಿರಬಹುದು. ಪ್ರತಿವಾದಿಗಳು ನನ್ನ ತಂದೆಯ ಸ್ವಂತ ಸಹೋದರರು. ನನ್ನ ತಂದೆ ಜೀವಂತ ಇದ್ದಾಗ ನನ್ನ ತಂದೆ ಮತ್ತು ಪ್ರತಿವಾದಿಗಳು ಜಂಟಿ

ಕುಟುಂಬದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. OS No.249/2021 ಪ್ರತಿವಾದಿಗಳು ನನ್ನ ಮತ್ತು ಇತರರ ಮೇಲೆ ವಿಭಾಗಕ್ಕಾಗಿ ಹಾಕಿದ್ದಾರೆ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ತಕರಾರು ಹಾಕಿಲ್ಲ. ಸದರಿ ಪ್ರಕರಣ ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾಮದೇವನಿಗೆ ಒಬ್ಬ ಮಗ. ಸದರಿಯವರ ಪೂರ್ಣ ಹೆಸರು ನಾಗೇಶ ನಾಮದೇವ ಗೌಡಾ. ಸದರಿ ನಾಮದೇವನಿಗೆ ಎರಡು ಜನ ಮಕ್ಕಳಿದ್ದರು ಅವರ ಪೈಕಿ ಒಬ್ಬ ಮೃತ ಪಟ್ಟಿದ್ದಾನೆ. ನಾಗೇಶ ನಾಮದೇವನಿಗೆ ಕೊಲೆ ಪ್ರಕರಣದಲ್ಲಿ ಜೇಲಿಗೆ ಹೋಗಿ ಬಂದಿದ್ದಾನೆ ಎಂದರೆ ಸರಿ.

ಈ ಕೇಸನ್ನು ನಾನು ಒಬ್ಬನೇ ಹಾಕಿದ್ದೇನೆ. ಮೂರನೇ ವಾದಿ ನನ್ನ ತಂಗಿ. ನಾನು ಉಳಿದ ವಾದಿಗಳ ಪರವಾಗಿ ಸಾಕ್ಷ್ಯ ನುಡಿಯುತ್ತಿಲ್ಲ. ಸರ್ವೆ ನಂಬರ 384/1*2/ಎ ಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ಪ್ರತಿವಾದಿಗಳು ನಮಗೆ ಯಾವುದೇ ರೀತಿ ಯಾವಾಗಲೂ ತೊಂದರೆ ಕೊಟ್ಟಿಲ್ಲ. ಸಾಕ್ಷಿ ಮುಂದುವರಿದು ಹೆಣ್ಣುಮಕ್ಕಳು ಜಗಳ ಆಡಿದ್ದಾರೆ ಆ ನಂತರ ಜಗಳ ಮಾಡಲು ಬಂದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ:** ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.